ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily


ಸಂಪುಟ – 01 ಸಂಚಿಕೆ – 100 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 28–10–2023 ಶನಿವಾರ | ಪುಟ: 4 | ಬೆಲೆ : ರೂ.2–00
Volume - 01 Issue - 100 | Title- Code: KARKAN 28269 | Chitradurga | Date: 28-10-2023 Saturday | Page: 4 | Price: Rs. 2-00

ಒಳಪುಟದ ಸುದ್ದಿಗಳು
ಜಿಲ್ಲೆಯಲ್ಲಿ 14,01,830 ಮತದಾರರು, 1661 ಮತಗಟ್ಟೆ 46906 ಯುವ ಮತದಾರರು 2
ರಾಮಾಯಣ ಮತ್ತು ಉದಾರ ನಿಲುವು 2
ಚಿತ್ರದುರ್ಗ ಜಿಲ್ಲಾ ವಾಲ್ಮೀಕಿ ಪ್ರಶಸ್ತಿ ಪಡೆದ ಸಾಧಕರ ವಿವರ 3

ಸುದ್ದಿ, ಜಾಹಿರಾತಿಗೆ 9686622252

# ವಾಲ್ಮೀಕಿ ರಾಜ್ಯ ಪ್ರಶಸ್ತಿಗೆ ಐದು ಸಾಧಕರು







**1. ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ಎನ್.ವೈ. ಹನುಮಂತಪ್ಪ:** ಶ್ರೀಯುತರು ದಿನಾಂಕ 25.09.1939 ರಲ್ಲಿ ಜನಿಸಿ ಪ್ರಾಥಮಿಕ ಶಿಕ್ಷಣವನ್ನು ಚಿತ್ರದುರ್ಗದಲ್ಲಿ ಬಳ್ಳಾರಿಯಲ್ಲಿ ಪೂರ್ಣಗೊಳಿಸಿದರು. ಬೆಂಗಳೂರಿನ S.J.R.C. Law College ಕಾನೂನು ಪದವಿ ಪಡೆದು ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿಯಾಗಿ, ಆಂಧ್ರಪ್ರದೇಶದ ಹೈಕೋರ್ಟಿನ ನ್ಯಾಯಮೂರ್ತಿಗಳಾಗಿ ಗುರುತರವಾಗಿ ಸೇವೆಸಲ್ಲಿಸಿದ್ದಾರೆ. ಶ್ರೀಯುತರು ಒರಿಸ್ಸಾ ಹೈಕೋರ್ಟಿನ ಮುಖ್ಯನ್ಯಾಯಮೂರ್ತಿಯಾಗಿ ಸೇವೆ ಅನುಪಮ ಸಲ್ಲಿಸಿದ್ದಾರೆ. ಅನೇಕ ಐತಿಹಾಸಿಕ ತೀರ್ಪುಗಳನ್ನು ನೀಡಿದ್ದಾರೆ, ಶ್ರೀಯುತರು ಗಣನೀಯವಾಗಿ ಸಮಾಜ ಸೇವೆ ಸಲ್ಲಿಸಿದ್ದಾರೆ.

**2. ಶ್ರೀಮತಿ ಮಹಾದೇವಮ್ಮ ಕೋಂ. ರಂಗಸ್ವಾಮಿ:** ಶ್ರೀಯುತರು ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಶ್ರೀ ಶ್ರೀ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಜಿಯವರ ಮಾತೃಶ್ರೀ ಯವರಾಗಿದ್ದು, ಧಾರ್ಮಿಕ ಕ್ಷೇತ್ರಕ್ಕೆ ತಮ್ಮ ಪುತ್ರರತ್ನ ಶ್ರೀ ಶ್ರೀ ಶ್ರೀ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮಿಜಿಯವರನ್ನು ತ್ಯಾಗ ಮಾಡಿದ್ದು, ಧಾರ್ಮಿಕ ಕ್ಷೇತ್ರಕ್ಕೆ ಅಪರಿಮಿತ ಸೇವೆ ಹಾಗೂ ಸಮಾಜದ ಸಂಘಟನೆಗೆ ಮಹತ್ತರ ಪಾತ್ರವಹಿಸಿದ್ದಾರೆ. ಹಾಗಾಗಿ ಸಮುದಾಯ ಹಾಗೂ ಸರ್ಕಾರ ಇವರನಿಸ್ವಾರ್ಥ ಸೇವೆಯನ್ನು ಪರಿಗಣಿಸಿ 2023 ನೇ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

**3. ಶ್ರೀ ರಾಮಣ್ಣ ಮಹಾದೇವ ಗಸ್ತಿ:** ಶ್ರೀಯುತರು ಬೆಳಗಾವಿ ಜಿಲ್ಲೆಗೆ ಸೇರಿದವರಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಕಲ್ಪಿಸಿ ಅವರ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸಿದ್ದಾರೆ. ಶಿಕ್ಷಣ ಕೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.


**4. ಶ್ರೀ ಜಿ.ಓ. ಮಹಾಂತಪ್ಪ :** ಶ್ರೀಯುತರು ಹಾಸನ ಜಿಲ್ಲೆಯವರಾಗಿದ್ದು, ಸುಮಾರು 32 ಸಂಘ ಸಂಸ್ಥೆಗಳಲ್ಲಿ ಸಮಾಜ ಮುಖಿ ಕೆಲಸ ಮಾಡಿ ಸಮಾಜವನ್ನು ಮುಖ್ಯವಾಹಿಗೆ ತರಲು ಶ್ರಮಿಸಿದ್ದಾರೆ. ಸತತ 35 ವರ್ಷಗಳಿಂದ ವಾಲ್ಮೀಕಿ ನಾಯಕ ಸಂಘದ ಜಿಲ್ಲಾಧ್ಯಕ್ಷರಾಗಿ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಬಡವಿದ್ಯಾರ್ಥಿಗಳ ಶೈಕ್ಷಣಿಕ

**5. ಶ್ರೀ ಸೋಮಣ್ಣ:** ಶ್ರೀಯುತರು ಮೈಸೂರು ಜಿಲ್ಲೆಯವರಾಗಿದ್ದು, ಜೇನುಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು, ರಾಜ್ಯ, ರಾಷ್ಟ್ರ, ಹಾಗೂ ಅಂತರರಾಷ್ಟ್ರ ಮಟ್ಟದಲ್ಲಿ ಗಿರಿಜನರ ಕಲ್ಯಾಣಕ್ಕಾಗಿ ಹಾಗೂ ಸಮುದಾಯದ ಸಂಘಟನೆಗಾಗಿ ಶ್ರಮಿಸಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಭಾಜನರಾಗಿದ್ದಾರೆ.

**6. ಶ್ರೀಮತಿ ಶಾರದ ಪ್ರಭು ಹುಲಿ ನಾಯಕ:** ಶ್ರೀಯುತರು ರಾಯಚೂರು ಜಿಲ್ಲೆಯವರಾಗಿದ್ದು, ಸ್ತ್ರೀ ರೋಗ ತಜ್ಞ ವೈದ್ಯರಾಗಿದ್ದು, ಬುಡಕಟ್ಟು ಸಮುದಾಯದ ಶ್ರೇಯೋಭಿವೃದ್ಧಿಗೆ ಅನುಪಮ ಸೇವೆ ಸಲ್ಲಿಸಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಖ್ಯಾತ ವೈದ್ಯರಾಗಿದ್ದು, ಮಹಿಳೆಯರ ಆರ್ಥಿಕ ಸದೃಡತೆಗಾಗಿ ಸರ್ಕಾರದ ಯೋಜನೆಗಳ ಕುರಿತು ಕಾರ್ಯಾಗಾರಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಿದ್ದಾರೆ. ಮಹಿಳಾ ಸಹಾಯ ಸಂಘಗಳನ್ನು ಸ್ಥಾಪನೆ ಮಾಡಿ ಮಹಿಳಾ ಸಬಲೀಕರಣಕ್ಕಾಗಿ ಶ್ರಮಿಸಿದ್ದಾರೆ.

**7. ಶ್ರೀಮತಿ ಸುಕನ್ಯಾ ಮಾರುತಿ:** ಶ್ರೀಯುತರು ವಿಜಯನಗರ ಜಿಲ್ಲೆಯವರಾಗಿದ್ದು, ಕವಿಯತ್ರಿಯಾಗಿದ್ದು, ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದು, 5 ಕವನ ಸಂಕಲನಗಳನ್ನು ಲೋಕಾರ್ಪಣೆ ಮಾಡಿದ್ದಾರೆ. ಮಹಿಳಾ ಸಬಲೀಕಣಕ್ಕಾಗಿ ಹಾಗೂ ಸಮಾಜವನ್ನು ಸಂಘಟಿಸಲು ಅಪಾರವಾಗಿ ಶ್ರಮಿಸಿದ್ದಾರೆ.

**8. ಶ್ರೀಮತಿ ಸುಜಾತಮ್ಮ:** ಶ್ರೀಯುತರು ಬಳ್ಳಾರಿ ಜಿಲ್ಲೆಯವರಾಗಿದ್ದು, ಬಯಲಾಟ ಪ್ರದರ್ಶನಗಳನ್ನು ನೀಡುತ್ತಾ ಹಲವಾರು ಮೈಲಿಗಲ್ಲು ಸಾಧನೆ ಮಾಡಿದ್ದಾರೆ. 2008ರಲ್ಲಿ ಕಿತ್ತೂರು ರಾಣಿ ಪ್ರಶಸ್ತಿ, ಕರ್ನಾಟಕ ಜಾನಪದ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಸುಮಾರು 5000 ಬಯಲಾಟ ಹಾಗೂ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಚಿವ ನಾಗೇಂದ್ರ ಅವರು ಸುದ್ದಿಗೋಷ್ಠಿಯಲ್ಲಿ ಘೋಷಿಸಿದರು.






## ಫಾಸ್ಟ್ ನ್ಯೂಸ್

### ಅ.30ರಂದು ಸಂಜೀವಿನಿ ಮಾಸಿಕ ಸಂತೆ

ಚಿತ್ರದುರ್ಗ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮೆದೇಹಳ್ಳಿ ಒನಕೆ ಓಬವ್ವ ಸಂಜೀವಿನಿ ಗ್ರಮ ಪಂಚಾಯಿತಿ ಮಟ್ಟದ ಒಕ್ಕೂಟ ಇವರ ಸಹಯೋಗದೊಂದಿಗೆ ಇದೇ ಅಕ್ಟೋಬರ್ 30ರಂದು ಬೆಳಿಗ್ಗೆ 9ಕ್ಕೆ ಚಿತ್ರದುರ್ಗ ನಗರದ ಗಾಂಧಿ ವೃತ್ತದಲ್ಲಿ "ಸಂಜೀವಿನಿ ಮಾಸಿಕ ಸಂತೆ"- ಪ್ರದರ್ಶನ ಮತ್ತು ಮಾರಾಟ ಆಯೋಜಿಸಲಾಗಿದೆ. ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅವರು ಮಾಸಿಕ ಸಂತೆ ಉದ್ಘಾಟಿಸುವರು ಎನ್‌ಆರ್‌ಎಲ್‌ಎಂ (ಸಂಜೀವಿನಿ) ರೂಪುಗೊಂಡಂತಹ "ಮಾಸಿಕ ಸಂತೆ" ಕಾರ್ಯಕ್ರಮವು ಗ್ರಾಮ ಪಂಚಾಯಿತಿಮಟ್ಟದ ಮಹಿಳಾ ಒಕ್ಕೂಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವ-ಸಹಾಯ ಗುಂಪಿನ ಮಹಿಳೆಯರು ಸ್ಥಳೀಯವಾಗಿ ಉತ್ಪಾದಿಸುವ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸಲು ಸೂಕ್ತ ಮಾರುಕಟ್ಟೆ, ಪ್ರದರ್ಶನ ಮಾಡಲು ಉತ್ತಮ ಅವಕಾಶ ಕಲ್ಪಿಸಿಕೊಟ್ಟಿರುತ್ತದೆ.

ಚಿತ್ರದುರ್ಗ ತಾಲ್ಲೂಕಿನ ಸ್ವ-ಸಹಾಯ ಗುಂಪಿನವರು ಸ್ಥಳೀಯವಾಗಿ ಉತ್ಪಾದಿಸುವ ಉತ್ಪನ್ನಗಳಿಗೆ ಪ್ರದರ್ಶನ ಹಾಗೂ ಮಾರಾಟಕ್ಕಾಗಿ "ಮಾಸಿಕ ಸಂತೆ"ಯನ್ನು ನಡೆಸಲಾಗುವುದು ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

### ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿಗೆ ಅರ್ಜಿ

ಚಿತ್ರದುರ್ಗ: ಪ್ರಸಕ್ತ ಸಾಲಿನ ಕನ್ನಡ ರಾಜ್ಯೋತ್ಸವ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವವರನ್ನು ಆಯ್ಕೆ ಮಾಡಿ, ಜಿಲ್ಲಾ ಮಟ್ಟದಲ್ಲಿ ನ.1 ರಂದು ಜರುಗುವ ರಾಜ್ಯೋತ್ಸವ ಸಮಾರಂಭದ ಸಂದರ್ಭದಲ್ಲಿ ಸನ್ಮಾನಿಸಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸಾಹಿತ್ಯ, ಸಂಗೀತ, ಕಲೆ (ರಂಗಭೂಮಿ), ಜಾನಪದ, ಸಮಾಜ ಸೇವೆ, ಪರಿಸರ ಸಂರಕ್ಷಣೆ, ಕೃಷಿ, ಕ್ರೀಡೆ, ವಿಜ್ಞಾನ ತಂತ್ರಜ್ಞಾನ ಸಂಶೋಧನೆ, ವೈದ್ಯಕೀಯ, ವಿಶೇಷಚೇತನರ ಕ್ರೀಡೆ, ಚಿತ್ರಕಲೆ ಕ್ಷೇತ್ರಗಳಲ್ಲಿ ಉತ್ತಮ ಹಾಗೂ ಗಣನೀಯ ಸೇವೆ, ಸಾಧನೆಗೈದವರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತ.ರಾ.ಸು. ರಂಗಮಂದಿರ ಆವರಣ, ಚಿತ್ರದುರ್ಗ ಇವರಿಗೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

### ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿ ದಿವ್ಯಪ್ರಭು ಮಾಹಿತಿ

## ಜಿಲ್ಲೆಯಲ್ಲಿ 14,01,830 ಮತದಾರರು, 1661 ಮತಗಟ್ಟೆಗಳು

# 46906 ಯುವ ಮತದಾರರ ಸೇರ್ಪಡೆ

» ಚಿತ್ರದುರ್ಗ

ಚುನಾವಣೆಆಯೋಗದನಿರ್ದೇಶನದಂತೆ, ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ ವಿಧಾನಸಭಾವಾರು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಪ್ರಸ್ತುತ ಜಿಲ್ಲೆಯಲ್ಲಿ 14,01,830 ಮತದಾರರಿದ್ದು, 1661 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಅರ್ಹರು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ಡಿ. 09 ರವರೆಗೂ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ. ಅವರು ಹೇಳಿದರು.



ಈ ಕುರಿತು ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 6,98,024 ಪುರುಷ ಮತದಾರರು, 7,03,728 ಮಹಿಳಾ ಮತದಾರರು ಹಾಗೂ 78 ಇತರೆ ಮತದಾರರು ಸೇರಿದಂತೆ ಒಟ್ಟು 14,01,830 ಮತದಾರರಿದ್ದಾರೆ. ಮತಗಟ್ಟೆಗಳ ಸಂಖ್ಯೆ 1648 ರಿಂದ 1661ಕ್ಕೆ ಹೆಚ್ಚಿಸಲಾಗಿದೆ. ಯಾವುದೇ ಅರ್ಹ ಮತದಾರರು ಮತಪಟ್ಟಿಯಿಂದ ಹೊರಗೊಳಿಯಬಾರದು. ಈ ಉದ್ದೇಶದಿಂದ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯಲ್ಲಿ ಅರ್ಹ ಯುವಕ ಯುವತಿಯರು, ಸಾಮಾಜಿಕವಾಗಿ ಹಿಂದುಳಿದವರು, ಪರಿಶಿಷ್ಟ ಪಂಗಡ, ಅಲೆಮಾರಿಗಳು, ಲಿಂಗ ಪರಿವರ್ತಿತರು, ತೃತೀಯ ಲಿಂಗಿಗಳು, ದಮನಿತ ಮಹಿಳೆಯರು, ವಿಶೇಷ ಚೇತನರು, ಸಮಾಜದ ಮುಖ್ಯವಾಹಿನಿಯಿಂದ ಹೊರಗಿರುವವರನ್ನು ಪಟ್ಟಿಯಲ್ಲಿ ಸೇರಿಸಲು ವಿಶೇಷ ಆದ್ಯತೆ ನೀಡಲಾಗುವುದು. ಈ ಕುರಿತು ಜಾಗೃತಿ ಮೂಡಿಸಲು ಪಾಠಶಾಲೆ/ ಚುನಾವಣೆ ಜಾಗೃತಿ ಸಂಘ, ಮತದಾರರ ಸಾಕ್ಷರತಾ ಸಂಘ, ಸ್ವಯಂ ಸೇವಕರು, ಸದಸ್ಯರ ಮೂಲಕ ವ್ಯಾಪಕ ಪ್ರಚಾರ ಮಾಡಲಾಗುವುದು. ಇದರೊಂದಿಗೆ ಯುವ ಮತದಾರರನ್ನು ಸೆಳೆಯಲು ಫಲಕಗಳ ಪ್ರದರ್ಶನ, ಜಾಥಾ, ಸೈಕಲ್ ಹಾಗೂ ಬೈಕ್ ರ್‍ಯಾಲಿಗಳನ್ನು ಆಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು.ಜಿ.ಆರ್.ಜೆ ತಿಳಿಸಿದರು.

ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯಕ್ರಮ ಅ. 27 ರಿಂದ ಆರಂಭಗೊಂಡಿದ್ದು, ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಡಿ. 09 ಕೊನೆಯ ದಿನವಾಗಿದೆ. ಸಲ್ಲಿಕೆಯಾಗುವ ಹಕ್ಕು ಮತ್ತು ಆಕ್ಷೇಪಣೆ ಅರ್ಜಿಗಳನ್ನು ಡಿ. 26 ರೊಳಗೆ ತೀರ್ಮಾನಿಸಲಾಗುವುದು. 2024 ರ ಜನವರಿ 05 ರಂದು ಮತದಾರರ ಅಂತಿಮ ಪಟ್ಟಿ ಪ್ರಕಟಣೆಗೊಳ್ಳಲಿದೆ ಎಂದರು.

ಹೆಸರು ನೊಂದಣಿಗಾಗಿ ನವೆಂಬರ್ 18 ಹಾಗೂ 19, ಡಿಸೆಂಬರ್ 2 ಹಾಗೂ 3ನೇ ತಾರೀಖಿನಂದು ವಿಶೇಷ ಕಾರ್ಯಾಚರಣೆ ನಡೆಸಲಾಗುವುದು. ಈಗಾಗಲೇ ಜಿಲ್ಲೆಯಾದ್ಯಂತ ಜುಲೈ 21 ರಿಂದ ಆಗಸ್ಟ್ 21 ರವರೆಗೆ ಎಲ್ಲಾ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ ಮನೆ ಸಮೀಕ್ಷೆ ಕಾರ್ಯವನ್ನು ಕೈಗೊಂಡಿದ್ದಾರೆ. ಪ್ರಜಾಪ್ರತಿನಿಧಿ ಕಾಯ್ದೆ 1950ರ ಸೆಕ್ಷನ್ 14ಕ್ಕೆ ತಿದ್ದುಪಡಿ ತರಲಾಗಿದೆ. 18 ವರ್ಷ ತುಂಬುವ ಯುವ ಮತದಾರರು ವರ್ಷದ 1ನೇ ಜನವರಿ, 1ನೇ ಏಪ್ರಿಲ್, 1ನೇ ಜುಲೈ ಹಾಗೂ 1ನೇ ಅಕ್ಟೋಬರ್‌ಗೆ 18 ವರ್ಷ ಪೂರ್ಣಗೊಳ್ಳುವವರು ಮತದಾರರ ಪಟ್ಟಿಯಲ್ಲಿ ನೊಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಹೊಸದಾಗಿ ಹೆಸರು ಸೇರಿಸಲು ನಮೂನೆ-6, ಹೆಸರುಗಳನ್ನು ಕೈಬಿಡಲು ಅಥವಾ ಆಕ್ಷೇಪಣೆ ಸಲ್ಲಿಸಲು ನಮೂನೆ-7, ಮತದಾರ ಪಟ್ಟಿಯಲ್ಲಿ ತಿದ್ದುಪಡಿ, ವರ್ಗಾವಣೆ, ಎಪಿಕ್ ಕಾರ್ಡು ಬದಲಾವಣೆ ಹಾಗೂ ವಿಕಲಚೇತನ ಮತದಾರರನ್ನು ಗುರುತು ಮಾಡಲು ನಮೂನೆ-8 ಹಾಗೂ ಆಧಾರ್ ಜೋಡಣೆ ಮಾಡಲು ನಮೂನೆ-6ಬಿ ಗಳನ್ನು ತುಂಬಿ ಮತದಾನ ಕೇಂದ್ರ ಅಥವಾ ತಾಲ್ಲೂಕು ಕಚೇರಿ ಅಥವಾ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿಯೂ ಸಲ್ಲಿಸಬಹುದು. ಮತದಾರರು ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆ ಮಾಡಿಸಬೇಕು, ಜಿಲ್ಲೆಯಲ್ಲಿ ಈಗಾಗಲೆ ಶೇ. 89 ರಷ್ಟು ಮತದಾರರು ಆಧಾರ್ ಜೋಡಣೆ ಮಾಡಿಸಿದ್ದಾರೆ. ಅರ್ಜಿಗಳನ್ನು ಗಿಊಂ (ಗಿಂಣಜಡಿ ಊಜಟಠಿ ಟಟಿಜ) ನಲ್ಲಿ ಆನ್‌ಲೈನ್ ಮೂಲಕವು ಸಲ್ಲಿಸಬಹುದು ಎಂದರು. ಕರಡು ಮತದಾರರ ಪಟ್ಟಿಯನ್ನು ಮತಗಟ್ಟೆ ಕೇಂದ್ರ, ಗ್ರಾಮ ಪಂಚಾಯತಿ ಕಚೇರಿ, ನಗರ ಸಭೆ, ಪುರ ಸಭೆ, ಪಟ್ಟಣ ಪಂಚಾಯತಿ, ತಾಲ್ಲೂಕು ಹಾಗೂ ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರಿಗೆ ಪ್ರಚುರ ಪಡಿಸಲು ಪ್ರಕಟಿಸಲಾಗಿದೆ. ವೆಬ್ ಸೈಟ್ www.ceokarnataka.kar.nic.in ಮತ್ತು https://chitradurga.nic.in ನಲ್ಲಿಯೂ ಸಹ ಮತದಾರರ ಪಟ್ಟಿಯನ್ನು ಪರಿಶೀಲಿಸಬಹುದಾಗಿದೆ.

**46,906 ಯುವ ಮತದಾರರ ನೊಂದಣಿ** : ಕಳೆದ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ಜಿಲೆಯಾದ್ಯಂತ 46,906 ಯುವ ಮತದಾರರ ನೊಂದಣಿ ಮಾಡಲಾಗಿದೆ. ಇದರಲ್ಲಿ 25,152 ಪುರುಷ, 21,751 ಮಹಿಳಾ ಹಾಗೂ 03- ಇತರೆ ಯುವ ಮತದಾರರನ್ನು ಸೇರ್ಪಡೆಗೊಳಿಸಲಾಗಿದ್ದು, ರಾಜ್ಯದಲ್ಲಿಯೇ ಚಿತ್ರದುರ್ಗ ಜಿಲ್ಲೆಯಲ್ಲಿ ಅತಿ ಹೆಚ್ಚು ಯುವ ಮತದಾರರನ್ನು ಸೇರ್ಪಡೆ ಮಾಡಲಾಗಿದೆ.

ಈ ಬಾರಿ ಯುವ ಮತದಾರರನ್ನು ನೊಂದಣಿ ಮಾಡುವ ಸಲುವಾಗಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ಸಹಾಯಕ ಮತಪಟ್ಟಿ ನೊಂದಣಿ ಅಧಿಕಾರಿಯನ್ನಾಗಿ (ಎಇಆರ್‌ಓ) ಆಗಿ ನೇಮಿಸಲಾಗಿದೆ. ಮುಖ್ಯವಾಗಿ ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ಮೂಲಕ ಯುವ ಮತದಾರರ ನೊಂದಣಿಗೆ ಆದ್ಯತೆ ನೀಡಲಾಗುವುದು. ಜಿಲ್ಲೆಯಲ್ಲಿ 80 ವರ್ಷ ದಾಟಿದ 30,000 ಮತದಾರರು ಇದ್ದಾರೆ. ಇದರಲ್ಲಿ 100 ವರ್ಷ ದಾಟಿದ 86 ಮತದಾರರು ಇದ್ದು ಇವರನ್ನು ಸ್ವಾತಂತ್ರ್ಯದಿನಾಚರಣೆ ಸಂದರ್ಭದಲ್ಲಿ ಜಿಲ್ಲಾಡಳಿತದ ವತಿಯಿಂದ ಸನ್ಮಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು.ಜಿ.ಆರ್.ಜೆ ಮಾಹಿತಿ ನೀಡಿದರು. ಮತಪಟ್ಟಿಯಲ್ಲಿ ಹೆಸರು ನೊಂದಾಯಿಸಲು ವಯಸ್ಸಿನ ಧೃಡೀಕರಣಕ್ಕಾಗಿ ಜನನ ಪ್ರಮಾಣ ಪತ್ರ, ಆಧಾರ್, ಕಾರ್ಡ್, ಪಾನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಎಸ್.ಎಸ್.ಎಲ್.ಸಿ ಅಥವಾ ಪಿಯುಸಿ ಅಂಕಪಟ್ಟಿ, ಪಾಸ್ ಪೋರ್ಟ್‌ದಾಖಲೆಗಳನ್ನುನೀಡಬಹುದು. ವಿಳಾಸದ ಧೃಡೀಕರಣಕ್ಕಾಗಿ ನೀರು, ವಿದ್ಯುತ್, ಗ್ಯಾಸ್ ಸಂಪರ್ಕ ಒಂದು ವರ್ಷದ ಬಿಲ್‌ಗಳು, ಆಧಾರ್ ಕಾರ್ಡು, ಬ್ಯಾಂಕ್ ಪಾಸ್ ಬುಕ್, ಪಾಸ್‌ಪೋರ್ಟ್, ಕಂದಾಯ ಇಲಾಖೆಯ ಭೂ ಮಾಲೀಕತ್ವದ ದಾಖಲೆ, ನೊಂದಾಯಿತ ಬಾಡಿಗೆ ಭೋಗ್ಯ ಹಾಗೂ ಕ್ರಯಪತ್ರದ ದಾಖಲೆಗಳನ್ನು ನೀಡಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಂಪರ್ಕ ಕೇಂದ್ರದ ಸಹಾಯವಾಣಿ ಸಂಖ್ಯೆ -08194-222176 ಅಥವಾ ಟೋಲ್ ಫ್ರೀ ಸಂಖ್ಯೆ 1950ಕ್ಕೆ ಕರೆ ಮಾಡಬಹುದು. ಹೊರ ರಾಜ್ಯದ ಮತದಾರರು ಇಲ್ಲಿನ ಮತಪಟ್ಟಿಗೆ ಸೇರ್ಪಡೆಗೊಳ್ಳಲು, ಮೂಲ ಮತದಾರರ ನೊಂದಣಿ ಇರುವೆಡೆ ನಮೂನೆ-8 ರಲ್ಲಿ ವರ್ಗಾವಣೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ ವೇಳೆ ಜಿಲ್ಲೆಯ ಮತಪಟ್ಟಿಯಲ್ಲಿ ಸೇರ್ಪಡೆ ಮಾಡಲು ಅರ್ಜಿ ಆಂತರಿಕವಾಗಿ ಸೃಜನೆಗೊಳ್ಳುವುದು. ಇದರ ಆಧಾರದಲ್ಲಿ ಅಧಿಕಾರಿಗಳು ವಿಳಾಸಕ್ಕೆ ಭೇಟಿ ನೀಡಿ ಪರಿಶೀಲಿಸಿ ಇಲ್ಲಿನ ಮತಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವರು. ನಂತರದಲ್ಲಿ ಮೂಲ ಮತಪಟ್ಟಿಯಲ್ಲಿ ಹೆಸರು ನಿಷ್ಕ್ರಮಣೆಗೊಳ್ಳುವುದು ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟನೆ ನೀಡಿದರು.





# ರಾಮಾಯಣ ಮತ್ತು ಉದಾರ ನಿಲುವು


ಕವಿ ವಾಲ್ಮೀಕಿ ಮಹರ್ಷಿಗೆ ಜಯಂತಿಯನ್ನು ಆಚರಿಸುತ್ತಿರುವುದು, ಭಾರತದ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವು ಒಂದು. ಆದರೆ ಕವಿಯಿಂದ ರಚಿತವಾದ ಮಹಾಕಾವ್ಯ ರಾಮಾಯಣದ ಹೆಗ್ಗಳಿಕೆ ಇರುವುದು. ದೇಶದ ಉತ್ತರ ಮತ್ತು ದಕ್ಷಿಣವನ್ನು ಬೆಸೆಯುವಲ್ಲಿ. ಕೃಷ್ಣ ಪೂರ್ವ ಮತ್ತು ಪಶ್ಚಿಮಗಳನ್ನು ಬೆಸೆದರೆ, ಶ್ರೀ ರಾಮ ಉತ್ತರ ಮತ್ತು ದಕ್ಷಿಣವನ್ನು ಬೆಸೆಯುವ ಏಕೈಕ ಆರಾಧ್ಯ ದೈವವಾಗಿದ್ದಾನೆ ಎನ್ನುತ್ತಾರೆ ಸಮಾಜವಾದಿ ಚಿಂತಕರಾದ ಲೋಹಿಯರವರು.

ರಾಮ ಸೀತೆಯರ ಕಥೆ ನಡೆಯಿತೋ ಇಲ್ಲವೋ ತಿಳಿಯದು. ಆದರೆ, ಇಡೀ ಭಾರತದ ಜನರ ಮನಸ್ಸಿನಲ್ಲಿ ರಾಮಾಯಣದ ಎಲ್ಲ ಪಾತ್ರಗಳು ಅಚ್ಚೊತ್ತಿವೆ. ಕನ್ನಡ ಸಾಹಿತ್ಯ ಲೋಕದಲ್ಲಿ ನಾಗಚಂದ್ರನ ಪಂಪರಾಮಾಯಣದಿಂದ ಕುವೆಂಪು ಅವರ ಶ್ರೀ ರಾಮಾಯಣದರ್ಶನಂವರೆವಿಗೂ ಅನೇಕ ರಾಮಾಯಣಗಳು ಪ್ರಕಟಗೊಂಡಿದೆ. ಅಷ್ಟೇ ಏಕೆ ಭಾರತ ಅನೇಕ ಭಾಷೆಗಳ ಧ್ವನಿಯಾಗಿದೆ.

ಹೀಗೆ ಉತ್ತರ ಮತ್ತು ದಕ್ಷಿಣಗಳನ್ನು ಬೆಸೆಯುವ ರಾಮಾಯಣದಲ್ಲಿನ ಶ್ರೀ ರಾಮ ದೈವವಾಗಲು ಇರುವ ಪ್ರಬಲ ಕಾರಣಗಳಾವುವು? ರಾಮಾಯಣ ಯಾವುದರ ಪ್ರತಿಬಿಂಬ? ಎನ್ನುವ ಪ್ರಶ್ನೆಯನ್ನಿರಿಸಿಕೊಂಡರೆ, ಸುಮಾರು 600 ಕ್ಕೂ ಹೆಚ್ಚು ರಾಮಾಯಣಗಳು ಅಭಿವ್ಯಕ್ತಿ ಪಡೆದಿವೆ. ಅಲ್ಲದೆ ಥೈಲ್ಯಾಂಡ್, ಕಾಂಬೋಡಿಯ, ಜಾವಾ ಮುಂತಾದ ರಾಷ್ಟ್ರಗಳಲ್ಲಿ ರಾಮಾಯಣ ರಚನೆಗೊಂಡಿರುವ ಬಗೆಗೆಳೆ ನಮಗೆ ಉತ್ತರವನ್ನೀಯುತ್ತವೆ.

ಬಹು ಸ್ಪಷ್ಟವಾಗಿ, ರಾಮಾಯಣದ ರಾಮನ ವನವಾಸದ ಚಿತ್ರಣವೇ ನಮಗೆ ಮಾದರಿ. ಬದುಕಿನಲ್ಲಿ ಏಳು-ಬೀಳುಗಳನ್ನ ಕಾಣದ ಮನುಷ್ಯ ಬದುಕು ಹಾದಿ ಬಿಟ್ಟು ನಡೆಯಬಹುದಾದ ಸಾಧ್ಯತೆಗಳಿರುತ್ತದೆ. ಅಲ್ಲಿ ಧರ್ಮದ ಜಾಡು ಹುಟ್ಟಿಕೊಳ್ಳುವುದಿಲ್ಲ. ಆತ ಮರ್ಯಾದ ಪುರುಷೋತ್ತಮನೆಂದು ಕರೆಯಿಸಿಕೊಳ್ಳಲಾರ. ಕುವೆಂಪು ಅವರು ರಾಮಾಯಣ ಕುರಿತಂತೆ ಆಡಿರುವ ಮಾತುಗಳು ಇಲ್ಲಿ ಉಲ್ಲೇಖನೀಯ " ಇದು ಘಟಿತ ಘಟನೆಯನ್ನು ಪ್ರತಿಬಿಂಬಿಸುವ ಲೌಖಿಕ ಚರಿತ್ರೆಯಲ್ಲ. ಅಲೌಖಿಕ ಚಿರ ಸತ್ಯವನ್ನು ಪ್ರತಿಸೃಷ್ಟಿಸುವ ಅತ್ಯಂತ ನಿಜವಾದ ಕತೆ ಎಂದಿದ್ದಾರೆ. ರಾಮನು ಭೂಮಿಯ ಮಗಳಾದ ಸೀತೆಯನ್ನು ವರಿಸಿ ಆಕೆಯ ನೆಪದಿಂದಲೇ ಅಸುರೀ ಶಕ್ತಿಯನ್ನು ದಮನಗೊಳಿಸುತ್ತಾ ಮನೋಶಕ್ತಿಯನ್ನು ಬೆಳೆಸುವ ರೀತಿಯಲ್ಲಿ. ರಾವಣನ ಅವಿದ್ಯೆಯೆಂಬ ಕತ್ತಲಿನಿಂದ ಈ ನಮ್ಮ ಮರ್ತ್ಯಪ್ರಜ್ಞೆಯು ಅಮೃತ ಗೋಪುರಕ್ಕೆ ಏರುವಂತೆ ಅವರಿತರಿಸಿ ಬನ್ನಿ ಎಂದು ಸಹೃದಯರನ್ನು ಆಹ್ವಾನಿಸುತ್ತದೆ ಎನ್ನುತ್ತಾರೆ. ಹಾಗಾಗಿ ರಾಮಾಯಣದ ಶ್ರೇಷ್ಠತೆಯಿರುವುದು ರಾವಣನನ್ನು ಕೊಂದ ಕಾರಣಕ್ಕಾಗಿ ಅಲ್ಲ: ರಾಮತ್ವದ ವಿಕಾಸದ ಕಾರಣಕ್ಕಾಗಿ. ನಮ್ಮೊಳಗಿನ ರಾವಣತ್ವವನ್ನ ನೀಗಿಕೊಳ್ಳುವುದಕ್ಕಾಗಿ ಎನ್ನುವುದು ಗಮನೀಯ.

ಇನ್ನು ವಿಶಿಷ್ಟವೆಂದರೆ ರಾಮಾಯಣದೊಳಗಿನ ವಿಭೀಷಣನ ಸ್ವತಂತ್ರ ಅಭಿಪ್ರಾಯ. ಅಂದರೆ, ರಾಕ್ಷಸ ರಾಜ್ಯದಲ್ಲಿ ಕಂಡು ಬರುವ ಅಭಿಪ್ರಾಯ ಸ್ವಾತಂತ್ರ್ಯ ಇನ್ನಾವ ಪ್ರಜಾಸತ್ತೆಯಲ್ಲೂ ನಮಗೆ ಕಾಣಸಿಗದು. ಹಾಗೆಯೇ ಪ್ರಜಾಪ್ರಭುತ್ವದ ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತೆಗಳ ಮಾದರಿಗಳು ಸಾಕಷ್ಟು ಸಿಗುತ್ತವೆ. ಉದಾಹರಣೆಗೆ ಲಕ್ಷ್ಮಣ, ಭರತ, ಅನಲ, ವಾಲಿ, ಜಾಂಬವ, ಹನುಮಂತ ಮುಂತಾದ ಪಾತ್ರಗಳ ಸೃಷ್ಟಿ. ಇಲ್ಲಿನ ರಾಮ ಅತ್ಯಂತ ಸರಳ ಅವನು ವಲ್ಕದಾರಿಯಾಗಬಲ್ಲ, ನಾರುಮುಡಿ ಉಡಬಲ್ಲ, ಶಬರಿಯತಂಹ ಬೇಡತಿಯ ಆತಿಥ್ಯವನ್ನು ಸ್ವೀಕರಿಸಬಲ್ಲ. ಅವಳ ಆರೈಕೆಯಿಂದಾಗಿ ದುಃಖಿಸಿ ತನ್ನ ವೃತ್ತಾಂತವನ್ನೆಲ್ಲಾ ಅವಳಿಗೆ ಅರುಹಬಲ್ಲ. ಇದೇ ವಾಲ್ಮೀಕಿ ರಾಮಾಯಣದೊಳಗೆ ನೆಲೆಕಾಣಿಸಿರುವ ಉದಾರತೆ. ಈ ಉದಾರತೆ ರಾಷ್ಟ್ರದಲ್ಲಿ ಇನ್ನಷ್ಟು ಗಟ್ಟಿಗೊಳ್ಳಬೇಕಾಗಿದೆ. ರಾಮಾಯಣದ ಓದಿನಿಂದ ನಮಗೆ ಆನಂದ, ಶಾಂತಿ ಮತ್ತು ಪ್ರೀತಿಗಳು ದೊರೆಯುವುದು ಅಲ್ಲಿನ ಮನುಷ್ಯ ಹಾಗೂ ಪ್ರಕೃತಿಯ ಅಂತಸ್ಸಭಂದದಿಂದಾಗಿಯೇ ಹೊರೆತು, ಮನುಷ್ಯ ವಿರೋಧಿ ಆಲೋಚನೆ ಮತ್ತು ಯುದ್ಧ ನೀತಿಗಳಿಂದಲ್ಲ ಎನ್ನುವುದು ರಾಮಾಯಣವನ್ನು ಓದಿದ ಯಾರಿಗಾದರೂ ಅರಿವಿಗೆ ಬಾರದಿರದು.



» ಡಾ. ಎಸ್ ಮಾರುತಿ,
ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು ಹಿರಿಯೂರು

# ಜಿಲ್ಲಾ ವಾಲ್ಮೀಕಿ ಪ್ರಶಸ್ತಿ ಪಡೆದ ಸಾಧಕರ ವಿವರ

## ಕಲಾವಿದ ಶ್ರೀ ವೀರೇಶ್



- **ತಂದೆ : ಶ್ರೀ ಟಿ.ವಿ. ಮಲ್ಲಿಕಾರ್ಜುನಸ್ವಾಮಿ**
- **ತಾಯಿ : ಶ್ರೀಮತಿ ಜಿ.ಟಿ. ಮಂಗಳಮ್ಮ**
- **ಜನ್ಮದಿನಾಂಕ :** 26ನೇ ಜನವರಿ 1967
- **ವಿದ್ಯಾಭ್ಯಾಸ :** ಬಿ.ಎಸ್ಸಿ .ಎಲ್.ಎಲ್.ಬಿ
- **ವೃತ್ತಿ :** ಛಾಯಾಗ್ರಹಣ, ಕ್ರಿಯೇಟಿವ್ ಸ್ಟುಡಿಯೋ ಮೂಲಕ 27 ವರ್ಷಗಳ ಸೇವೆ
- **ಪ್ರವೃತ್ತಿ:** ಚಿತ್ರಕಲೆ ನಾಡಿನ ಪ್ರಖ್ಯಾತ ಕಲಾವಿದರಾದ ಶ್ರೀಯುತ ಎಂ.ಟಿ.ವಿ. ಆಚಾರ್ಯ ಅವರಿಂದ ಅಂಚೆ ಮೂಲಕ ಕಲಾಶಿಕ್ಷಣ – 1988, ಪ್ರಥಮ ರಾಂಕ್, ಖ್ಯಾತ ಚಿತ್ರಕಲಾವಿರಾದ ದಿ ಶ್ರೀ ಬಿ.ಕೆ. ಎಸ್. ವರ್ಮರವರಿಂದ ಸ್ವೀಕಾರ
- **ಕಲಾ ಸಾಧನೆ :** ವೀರೇಶ್ ಮತ್ತು ಪೆನ್ಸಿಲ್ (ಕನ್ನಡದ ಕೆಲವು ಕವಿಗಳ ಭಾವಚಿತ್ರ ರಚನೆಯ ಪುಸ್ತಕ 3 – 2008)
- **ನಾಡಿನ ಖ್ಯಾತ ಸಾಹಿತಿಗಳ ಕೃತಿಗಳಿಗೆ ಮುಖಪುಟ ಮತ್ತು ಒಳಪುಟಗಳ ಸಾಂದರ್ಭಿಕ ಚಿತ್ರಗಳ ರಚನೆ**
- **ಕನ್ನಡದ ಪ್ರಮುಖ ವಾರ ಮತ್ತು ಮಾಸಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳು ಪ್ರಕಟ**
- **ರಾಷ್ಟ್ರ ಮಟ್ಟದ ಬ್ರೆಸ್ಟ್ ಕ್ಯಾನ್ಸರ್ ಅವೆರ್‌ನೆಸ್ ( ಸ್ತನ ಕ್ಯಾನ್ಸರ್ ಜಾಗೃತಿ) ಕಲಾಕೃತಿ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪುರಸ್ಕಾರ - 2012**
- **ಇಂಟರ್ ನ್ಯಾಷನಲ್ ವಾಟರ್ ಕಲರ್ ಸೊಸೈಟಿ, ನ್ಯೂಡೆಲ್ಲಿ ಅಮೂರ್ತ ಜಲವರ್ಣ ಕೃತಿಯ ಆಯ್ಕೆ- 2018**
- **ಏಕವ್ಯಕ್ತಿ ಪ್ರದರ್ಶನ** (AMBITION) **ಚಿತ್ರಕಲಾ ಪರಿಷತ್ತು, ಬೆಂಗಳೂರು - 2015**
- **ಕಲಾ ಪ್ರದರ್ಶನಗಳು** (Art Exhibition) **:** Height of Depth ಏಕವ್ಯಕ್ತಿ ಕಲಾ ಪ್ರದರ್ಶನ (ಆಳದ ಎತ್ತರ ಅಲ್ಲಮ) Art 2 Day Gallery - PUNE 2018 Feb
- **ಏಕವ್ಯಕ್ತಿ ಪ್ರದರ್ಶನ** (HEIGHT OF DEPTH) **ಚಿತ್ರಕಲಾ ಪರಿಷತ್ತು, ಬೆಂಗಳೂರು ನವೆಂಬರ್ 2019**
- **ಚಿತ್ರದುರ್ಗ ನಗರದಲ್ಲಿ ಪ್ರಥಮ ಬಾರಿಗೆ ತನ್ನ ವಾಸದ ಮನೆಯಲ್ಲಿ ಚಿತ್ರಕಲಾ ಗ್ಯಾಲರಿಯನ್ನಾಗಿ ಪರಿವರ್ತಿಸಿ ಪ್ರಾರಂಭಿಸಿದ್ದು ಜುಲೈ 10-2023**
- **ಅಕ್ಟೋಬರ್ 10-2023ರ ಮದಕರಿ ನಾಯಕನ ಜಯಂತ್ಯೋತ್ಸವದ ಪ್ರಯುಕ್ತ ಚಿತ್ರದುರ್ಗದ ಐತಿಹಾಸಿಕ ಆರಸರಾದ ಮದಕರಿನಾಯಕನ ನವತಾರುಣ್ಯದ ಕಲಾಕೃತಿ ರಚನೆ ಮಾಡಿದಕ್ಕಾಗಿ ಅವರಿಗೆ ನಾಯಕ ಸಮಾಜದಿಂದ ನೀಡುತ್ತಿರುವ ಜಿಲ್ಲಾ ವಾಲ್ಮೀಕಿ ಪ್ರಶಸ್ತಿ ಆಯ್ಕೆ ಮಾಡಿ ಸಮಾಜದಿಂದ ಗೌರವಿಸಲಾಗುತ್ತಿದೆ.**

## ಜಿಲ್ಲಾ ವಾಲ್ಮೀಕಿ ಪ್ರಶಸ್ತಿ ಪುರಸ್ಕೃತರಾದ ಪಿ.ವಿ.ಅರುಣ್ ಕುಮಾರ್ ಪರಿಚಯ

ಶ್ರೀ ಅಹೋಬಲ ಸ್ಟೀಲ್ಸ್ ಅಂಡ್ ಸಿಮೆಂಟ್ಸ್ ಮತ್ತು ಅಹೋಬಲ ಟಿವಿಎಸ್ ಮೂಲಕ ಇಂದು ಚಿತ್ರದುರ್ಗ ನಗರದ ಮನೆ ಮಾತಾಗಿರುವ ಮಾಲೀಕ ಅರುಣ್ ಕುಮಾರ್ ನಗರದಲ್ಲಿ ಬೆಳೆಯುತ್ತಿರುವ ಯುವ ಉದ್ಯಮಿಗಳಲ್ಲಿ ಒಬ್ಬರಾಗಿದ್ದಾರೆ. ನೌಕರಿಯ ಬೆನ್ನು ಹತ್ತಿ ಹೋಗುವವರ ನಡುವೆ ಚಿಕ್ಕ ವಯಸ್ಸಿನಲ್ಲೇ ವ್ಯಾಪಾರ, ವಹಿವಾಟು ಎಂದು ಯೋಚಿಸಿ, ತೊಡಗಿಸಿಕೊಂಡು ಸಮಾಜದ ಜೊತೆ ಉತ್ತಮ ಸಂಬಂಧ ಬೆಳೆಸಿಕೊಂಡು ಸಮಾಜಮುಖಿ ಕಾರ್ಯಗಳಿಗೆ ಕೈ ಜೋಡಿಸಿಕೊಂಡು ಬಂದಿರುವ ಅರುಣ್ ಅವರಿಗೆ ಜಿಲ್ಲಾ ವಾಲ್ಮೀಕಿ ಪ್ರಶಸ್ತಿ ಲಭಿಸಿದೆ ಎಂದರೆ ತಪ್ಪಾಗಲಾರದು.

ಇವರು ಮೂಲ ಚಿತ್ರದುರ್ಗ ತಾಲೂಕಿನ ಹುಣಸೇಕಟ್ಟೆ ಗ ವ್ಯವಸಾಯದ ಕುಟುಂಬದ ಹಿನ್ನೆಲೆಯಿದ್ದರೂ. ಎಸ್‌ಜೆಎಂ ಕಾಲೇಜಿನಲ್ಲಿ ಬಿಎ ಪದವಿ ಮುಗಿದ ನಂತರ ಪೂರ್ಣ ಪ್ರಮಾಣದಲ್ಲಿ ಬ್ಯುಸಿನೆಸ್ನಲ್ಲಿ ತೊಡಗಿಸಿಕೊಂಡರು. ಚಿಕ್ಕಜಾಜೂರಿನಲ್ಲಿ ನಮ್ಮ ಮಾವನವರಾದ ಲಕ್ಷ್ಮಿಕಾಂತ್ ಭರವಸೆ ಪ್ರೋತ್ಸಾಹ ಇವರನ್ನು ಉದ್ಯಮಿಯಾಗಿ ಮಾಡಿತು. ವ್ಯಾಪಾರ, ವಹಿವಾಟಿನಲ್ಲಿ ತೊಡಗಿಸಿಕೊಂಡು ಹಂತ ಹಂತವಾಗಿ ಬೆಳೆಯುತ್ತ ಬಂದರು. ಸುಮಾರು 10 ವರ್ಷಗಳ ವರ್ಷದಿಂದ ಉದ್ಯಮ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ . ಎಂಟು ವರ್ಷಗಳ ಸ್ಟೀಲ್ ಅಂಡ್ ಸಿಮೆಂಟ್, ಈಗ ಒಂದುವರೆ ವರ್ಷದಿಂದ ಟಿವಿಎಸ್ ಶೋ ರೂಂ ಆರಂಭಿಸಿ ಅತ್ಯಂತ ಕಡಿಮೆ ಅವಧಿಯಲ್ಲಿ ಹೆಚ್ಚು ಜನಪ್ರಿಯತೆ ಪಡೆದರು. ಕಳೆದ ತಿಂಗಳು ಹಿರಿಯೂರು ನಗರದಲ್ಲಿ ಮತ್ತೊಂದು ಟಿವಿಎಸ್ ಶೋ ರೂಂ ಬ್ರಾಂಚ್ ಆರಂಭಿಸಿದ ಅರುಣ್ ಕಷ್ಟಗಳ ಮೆಟ್ಟಿನಿಂತು ಯಶಸ್ಸು ಸಾಧಿಸಿಕೊಂಡು ಬಂದಿದ್ದಾರೆ.

- **ಕಂಪನಿಗಳಿಂದ ಪುರಸ್ಕಾರ:** ನನಗೆ ಮೊದಲು ಜೆಪಿ ಸಿಮೆಂಟ್ನಿಂದ 2016 ರಲ್ಲಿ ಚಿತ್ರದುರ್ಗದಲ್ಲಿ ಅತಿ ಹೆಚ್ಚು ಸೇಲ್ನಲ್ಲಿ ಎರಡನೇ ಸ್ಥಾನ ಸಾಧಿಸಿದ್ದಕ್ಕೆ ಪುರಸ್ಕಾರ ನೀಡಿದ್ದರು. 2017 ರಿಂದ 2022 ರ ತನಕ ಅಲ್ಟ್ರಾಟೆಕ್ ಸೀಮೆಂಟ್ನಲ್ಲಿ ಜೋನಲ್ ಸೇಲ್ನಲ್ಲಿ ನಂಬರ್ ಒನ್(ಟಾಪರ್) ಪುರಸ್ಕಾರ ಸಿಕ್ಕಿದೆ. ಎರಡು ಬಾರಿ ಟಿವಿಎಸ್ ಕಂಪನಿಯಲ್ಲಿ ಕರ್ನಾಟಕ 2 ರಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.



ನನಗೆ ಜಿಲ್ಲಾ ವಾಲ್ಮೀಕಿ ಪ್ರಶಸ್ತಿ ದೊರಕಿರುವುದು ಅತಿ ಚಿಕ್ಕ ವಯಸ್ಸಿನಲ್ಲಿ ನನಗೆ ದೊರೆತಿರುವ ದೊಡ್ಡ ಗೌರವವಾಗಿದ್ದು ಅತ್ಯಂತ ಸಂತೋಷ ತಂದಿದೆ. ಉದ್ಯಮದಲ್ಲಿ ಅನೇಕ ಬಾರಿ ನಂಬರ್ ಪ್ರಶಸ್ತಿಗಳು ಲಭಿಸಿದೆ. ಆದರೆ ಸಮಾಜದಿಂದ ಗೌರವಿಸುವ ಈ ಪ್ರಶಸ್ತಿ ನನಗೆ ಜೀವಮಾನದ ಒಂದು ಅಮೋಘ ಸಮಯವಾಗಿದೆ. ಮುಂದಿನ ದಿನದಲ್ಲಿ ಹೀಗೆ ನನ್ನ ಕಾರ್ಯ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಎಲ್ಲಾ ಸಮಾಜದವರು ನನ್ನ ಉದ್ಯಮಕ್ಕೆ ಬೆಂಬಲವಾಗಿ ನಿಂತಿದ್ದು ಅವರ ಪ್ರೀತಿ ವಿಶ್ವಾಸಕ್ಕೆ ನಾನು ಸದಾ ಋಣಿಯಾಗಿರುತ್ತೇನೆ.

» **ಪಿ.ವಿ.ಅರುಣ್ ಕುಮಾರ್ ಮಾಲೀಕರು ಶ್ರೀ ಅಹೋಬಲ ಟಿವಿಎಸ್ ಮತ್ತು ಶ್ರೀ ಅಹೋಬಲ ಸ್ಟೀಲ್ ಅಂಡ್ ಸಿಮೆಂಟ್ ಚಿತ್ರದುರ್ಗ**

## ಹಿರಿಯ ವರದಿಗಾರರಾದ ಅಹೋಬಲಪತಿ ಪರಿಚಯ



ಪ್ರಸ್ತುತ ವಿಜಯ ಕರ್ನಾಟಕ ದಿನಪತ್ರಿಕೆಯ ಚಿತ್ರದುರ್ಗ ಜಿಲ್ಲೆಯ ವಿಶೇಷ ಪ್ರತಿನಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಂ.ಎನ್. ಅಹೋಬಳಪತಿ ಮೂಲತಃ ತುಮಕೂರು ಜಿಲ್ಲೆಯ, ಪಾವಗಡ ತಾಲ್ಲೂಕಿನ ರಂಗಸಮುದ್ರ ಗ್ರಾಮದವರು. ಚಿತ್ರದುರ್ಗ ಸರ್ಕಾರಿ ಕಲಾ ಕಾಲೇಜಿನಲ್ಲಿ ಪದವಿ ಶಿಕ್ಷಣದ ನಂತರ ತೊಂಬತ್ತರ ದಶಕದ ಮಧ್ಯಭಾಗದಿಂದ ಚಿತ್ರದುರ್ಗದ ಸುದ್ದಿಗಿಡುಗ ದಿನಪತ್ರಿಕೆ ಪತ್ರಿಕಾ ವೃತ್ತಿ ಆರಂಭಿಸಿದರು. 1998 ರ ನಂತರ 2005 ರವರೆಗೆ ಕೋಲಾರ ಚಿನ್ನದ ಗಣಿ ಕಾರ್ಮಿಕರು, ಆದಿವಾಸಿ, ಗಿರಿಜನ ಹೋರಾಟ, ಕೋಮು ಸೌಹಾರ್ದ ಚಟುವಟಿಕೆಗಳ ಜೊತೆ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದಾರೆ. ಗೌರಿ ಲಂಕೇಶ್, ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡಪ್ರಭ, ಸಂಡೇ ಇಂಡಿಯನ್ ನಲ್ಲಿ ವೃತ್ತಿ ನಿರ್ವಹಿಸಿದ್ದಾರೆ. ಕರ್ನಾಟಕ ಸರ್ಕಾರದ “ಕಣಜ" ಅಂತರ್ಜಾಲ ಜ್ಞಾನಕೋಶದಲ್ಲಿ ಯೋಜನಾ ಸಹಾಯಕರಾಗಿಯೂ ಕೆಲಸ ಮಾಡಿದ್ದಾರೆ. ವಿಜಯ ಕರ್ನಾಟಕದಲ್ಲಿ ವಿಶೇಷ ವರದಿಗಳ ಮೂಲಕ ಗ್ರಾಮೀಣ ರೈತರು, ಕಾರ್ಮಿಕರು, ಪ್ರಚಲಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಜನರ ಧ್ವನಿಯನ್ನು ದಾಖಲಿಸುತ್ತಾ ಬಂದಿದ್ದಾರೆ.





## ಜಿಲ್ಲಾ ವಾಲ್ಮೀಕಿ ಪ್ರಶಸ್ತಿಗೆ ರುದ್ರಪ್ಪ ಆಯ್ಕೆ

ರುದ್ರಪ್ಪ ಅವರು ನಗರದ ಕೆಳಗೋಟೆಯವರು ಇವರು ಚೀಫ್ ಇಂಜಿನಿಯರ್ ಆಗಿ ರಾಜ್ಯದ ನಾನಾ ಕಡೆ ಸೇವೆ ಸಲ್ಲಿಸಿದ್ದಾರೆ. ಇವರು ಹಲವು ದೇವಸ್ಥಾನಗಳು ಕಟ್ಟಿಸುವಲ್ಲಿ ಇವರ ಪಾತ್ರ ದೊಡ್ಡದಿದೆ. ಇವರು ನಾಯಕ ಸಮಾಜದ ಒಡನಾಡಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಸೇವೆಯನ್ನು ಗುರುತಿಸಿ ನಾಯಕ ಸಮಾಜದಿಂದ ಜಿಲ್ಲಾ ನಾಯಕ ಸಮಾಜದಿಂದ ಜಿಲ್ಲಾ ವಾಲ್ಮೀಕಿ ಪ್ರಶಸ್ತಿಗೆ ಪಾತ್ರರಾಗಿರುವುದು ಸಂತಸ ತಂದಿದೆ.

## ಡಾ.ಎನ್.ಎಸ್.ಮಹಂತೇಶ ಪರಿಚಯ



**ವೈಯಕ್ತಿಕ:** 05ನೇ ಫೆಬ್ರುವರಿ 1984

**ಜನ್ಮ ಸ್ಥಳ :** ನೇರಲಗುಂಟೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಸಂಪರ್ಕ ವಿಳಾಸ ಎನ್.ಡಿ. ಶಿವಣ್ಣ, ಶ್ರೀಮತಿ ರೇಣುಕಮ್ಮ ನಾಗರಕಟ್ಟೆ ಹತ್ತಿರ, ಸ್ಟೇಡಿಯಂ ರಸ್ತೆ, ಚಿತ್ರದುರ್ಗದಲ್ಲಿ ನೆಲೆಸಿದ್ದಾರೆ.

* ಇತಿಹಾಸ ಮತ್ತು ಪ್ರಕ್ತನಾಶಾಸ್ತ್ರ, (2005–07) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ದ್ವಿತೀಯ ರ್ಯಾಂಕ್, ಹುಣಸೆಕಟ್ಟೆ ಮನೆತನದ ಶ್ರೀಮತಿ ಶಾರದ ಚಂದ್ರಶೇಖರಪ್ಪ ಚಿನ್ನದ ಪದಕ.
* ಪ್ರಾಚೀನ ಇತಿಹಾಸ ಮತ್ತು ಪುರಾತತ್ವ (2007–08), (ವಿಷಯ: ಹೊಸದುರ್ಗ ಪರಿಸರದ ದೇವಾಲಯಗಳು), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
* ಪಿಜಿ ಡಿಪ್ಲೋಮ ಶಾಸನಶಾಸ್ತ್ರ (2008–09) (ವಿಷಯ: ಹೊಸದುರ್ಗ ತಾಲ್ಲೂಕಿನ ಶಾಸನಗಳು) ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ
* **ಪಿ.ಹೆಚ್.ಡಿ :** ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ (2009–13), (ವಿಷಯ: ಹೊಸದುರ್ಗ ತಾಲ್ಲೂಕು ಪರಿಸರ: ಸಾಂಸ್ಕೃತಿಕ ಅಧ್ಯಯನ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

**03. ಸಂಶೋಧನಾ ಗುರುಗಳು:** ಡಾ. ರಾಜಾರಾಮ ಹೆಗಡೆ, ಡಾ. ಜಿ. ಸರ್ವಮಂಗಳ, ಪ್ರೊ. ಲಕ್ಷ್ಮಣ್ ತೆಲಗಾವಿ, ಡಾ. ಸಿ.ಎಸ್. ವಾಸುದೇವನ್, ಡಾ. ಎಸ್.ವೈ. ಸೋಮಶೇಖರ್

**3.1 ಇತಿಹಾಸ ಉಪನ್ಯಾಸಕ :** ಚಳ್ಳಕೆರೆಯ ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದ ಚಿತ್ರದುರ್ಗದ ಶ್ರೀ ವೆಂಕಟೇಶ್ವರ ಪ್ರಥಮ ದರ್ಜೆ 2/6 ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ನಾತಕೋತ್ತರ ಆಗ್ಯಾಮನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಣೆ.

**05. ಆಸಕ್ತ ವಿಷಯಗಳು:** ಪ್ರಾಗಿತಿಹಾಸ, ಇತಿಹಾಸ, ಶಾಸನ, ನಾಣ್ಯ, ಹಸ್ತಪ್ರತಿ, ಶಿಲ್ಪ ವಾಸ್ತುಶಿಲ್ಪ, ಜಾನಪದ

**06. ಸಂಶೋಧನ ಮಾರ್ಗದರ್ಶನ:** ದಾವಣಗೆರೆ ವಿಶ್ವವಿದ್ಯಾನಿಲಯದ ಇತಿಹಾಸ ಅಧ್ಯಯನ ವಿಭಾಗದ (2013–19) 50 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಶೋಧನ ನಿಬಂಧಗಳಿಗೆ ಮಾರ್ಗದರ್ಶಕರಾಗಿ ಕಾರ್ ನಿರ್ವಹಣೆ.

**07. ಸೇವಾನುಭವ ಮತ್ತು ಆಡಳಿತ:** 2008ರಲ್ಲಿ ರೇಣುಕಾ ಪ್ರಕಾಶನ ಸಂಸ್ಥೆ ಸ್ಥಾಪನೆ ಹಾಗೂ ಸಂಚಾಲಕರಾಗಿ ಸುಮಾರು 7 ಸಂಶೋಧನಾ ಕೃತಿಗಳ ಪ್ರಕಟಣೆ. ಪ್ರೊ. ಲಕ್ಷ್ಮಣ್ ತೆಲಗಾವಿ ಸ್ಥಾಪಿಸಿರುವ, ನಿರ್ದೇಶಕರಾಗಿರುವ ಚಿತ್ರದುರ್ಗ ಇತಿಹಾಸ ಕೂಟದ ಸಂಚಾಲಕರಾಗಿ 2017 ರಿಂದ ಸುಮಾರು 41 ಮಾಸಿಕ ಉಪನ್ಯಾಸ ಕಾರ್ಯಕ್ರಮಗಳ ಆಯೋಜನೆ ಹೀಗೆ ಎಲ್ಲಾವನ್ನು ಗುರುತಿಸಿ ನಾಯಕ ಸಮಾಜ ಜಿಲ್ಲಾ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.








# ಕರ್ನಾಟಕ ಸರ್ಕಾರ
# ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯಕ್ರಮಗಳು ಚಿತ್ರದುರ್ಗ ಜಿಲ್ಲೆ

2011ರ ಜನಗಣತಿಯ ಪ್ರಕಾರ ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆ 16,59,456 ಇದ್ದು, ಅದರಲ್ಲಿ ಚಿತ್ರದುರ್ಗ ಜಿಲ್ಲೆಯ ಪರಿಶಿಷ್ಟ ವರ್ಗದವರ ಜನಸಂಖ್ಯೆ 3,02,554 ಚಿತ್ರದುರ್ಗ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯಲ್ಲಿ ಇವರ ಪ್ರಮಾಣ ಶೇಕಡ 18.23 ರಷ್ಟಿದೆ. ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

## ಶೈಕ್ಷಣಿಕ ಕಾರ್ಯಕ್ರಮ

**1 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು:** 5 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಊಟ, ವಸತಿ, ಪುಸ್ತಕ, ಸೋಪ್‌ಕಿಟ್, ಲೇಖನ ಸಾಮಗ್ರಿ, ಉಡುಪು ಹಾಗೂ ಇನ್ನಿತರ ಅಗತ್ಯ ಪರಿಕರಗಳನ್ನು ಉಚಿತವಾಗಿ ಒದಗಿಸಲು ವಿದ್ಯಾರ್ಥಿ ನಿಲಯಗಳನ್ನು ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ಸ್ಥಾಪಿಸಲಾಗಿದೆ. ಪ.ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 75ರಷ್ಟು ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಪ್ರವೇಶಾತಿ ಕಲ್ಪಿಸಿ ಗ್ರಾಮಾಂತರ ಪ್ರದೇಶದ ಬಡ ಕುಟುಂಬದ ಮಕ್ಕಳಿಗೆ ಇದರಿಂದ ಉಪಯೋಗವಾಗುತ್ತಿದೆ. ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.1650/–ಗಳ ವೆಚ್ಚದಲ್ಲಿ ಊಟ, ತಿಂಡಿ ಒದಗಿಸಲಾಗುವುದು. ಅಂಶಕಾಲಿಕ ಭೋಧಕರಿಂದ ಭೋಧನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 07 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿದ್ದು, ಇದರಲ್ಲಿ ಒಟ್ಟು 450 ವಿದ್ಯಾರ್ಥಿಗಳು ಸದರಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

**2 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:** ಮೆಟ್ರಿಕ್ ನಂತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ಬಾಲಕ/ಬಾಲಕಿಯರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತದೆ. ಪ್ರತಿ ವಿದ್ಯಾರ್ಥಿಗೆ ಮಾಸಿಕ ರೂ.1750/–ಗಳ ವೆಚ್ಚದಲ್ಲಿ ಊಟ, ತಿಂಡಿ ಒದಗಿಸಲಾಗುವುದು. ಪರಿಶಿಷ್ಟ ವರ್ಗದ ವಿದ್ಯಾರ್ಥಿಯಾಗಿದ್ದು ಮೆಟ್ರಿಕ್ ನಂತರ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಹರಿರಬೇಕು. ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 09 ವಿದ್ಯಾರ್ಥಿನಿಲಯಗಳಿದ್ದು, ಇದರಲ್ಲಿ ಒಟ್ಟು 913 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ.ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 75ರಷ್ಟು ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಪ್ರವೇಶಾತಿ ಕಲ್ಪಿಸಲಾಗುವುದು.

**3 ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಧನ ಸಹಾಯ:** ವಿದ್ಯಾರ್ಥಿ ನಿಲಯಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಉತ್ತೇಜನ ನೀಡಲು ಖಾಸಗಿ ವಿದ್ಯಾರ್ಥಿ ನಿಲಯಗಳಿಗೂ ಧನ ಸಹಾಯ ನೀಡಲಾಗುತ್ತಿದೆ. ವಿದ್ಯಾರ್ಥಿ ನಿಲಯಗಳಲ್ಲಿರುವ ಪ್ರತಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ರೂ.1350/–ಗಳನ್ನು ಭೋಜನ ವೆಚ್ಚಕ್ಕೆ ಅನುದಾನ ನೀಡಲಾಗುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 13 ವಿದ್ಯಾರ್ಥಿನಿಲಯಗಳಿದ್ದು, ಅದರಲ್ಲಿ ಒಟ್ಟು 792 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

**4 ಪ್ರತಿಷ್ಠಿತ ಶಾಲೆಗಳಿಗೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ದಾಖಲು:** ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವ ಪರಿಶಿಷ್ಟ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡಲು ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 18 ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪಡೆದ ವಿದ್ಯಾರ್ಥಿಯು ದ್ವಿತೀಯ ಪಿ.ಯು.ಸಿ. ವರೆಗೆ ಇಲಾಖೆಯಿಂದ ಶಾಲಾ ಶುಲ್ಕ & ನಿರ್ವಹಣೆ ಶುಲ್ಕವನ್ನು ವಾರ್ಷಿಕ ಒಬ್ಬ ವಿದ್ಯಾರ್ಥಿಗೆ ಗರಿಷ್ಠ ಜಿಲ್ಲಾ ಕೇಂದ್ರಸ್ಥಾನ ಶಾಲೆಗಳಿಗೆ(ಪಿ.ಯು.ಸಿ. ಮಾತ್ರ) ರೂ.75,000/–, ತಾಲ್ಲೂಕು/ಗ್ರಾಮ ಶಾಲೆಗಳಿಗೆ ರೂ.50,000/–ಗಳವರೆಗೆ ವೆಚ್ಚ ಭರಿಸಲಾಗುತ್ತಿದೆ. ಈ ಯೋಜನೆ ಸೌಲಭ್ಯ ಪಡೆಯಲು ವಿದ್ಯಾರ್ಥಿಯ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ.2,00,000/– ಮಿತಿಯಲ್ಲಿರಬೇಕು. ಸದರಿ ಯೋಜನೆಯಲ್ಲಿ ಒಂದು ಕುಟುಂಬದ 2 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ.

**5 ಆಶ್ರಮ ಶಾಲೆಗಳು:** ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆಶ್ರಮ ಶಾಲೆಗಳನ್ನು ಸ್ಥಾಪಿಸಲಾಗಿದೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ಸಮವಸ್ತ್ರ, ಶೂ, ಸಾಕ್ಸ್, ಲೇಖನ ಸಾಮಾಗ್ರಿ ಇತ್ಯಾದಿ ಶಿಕ್ಷಣ ಸವಲತ್ತುಗಳನ್ನು ಒದಗಿಸಲಾಗುವುದು. ಈ ಆಶ್ರಮ ಶಾಲೆಗಳಲ್ಲಿ ಓದುವ ಮಕ್ಕಳಿಗೆ 1 ರಿಂದ 5ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಲು ಅವಕಾಶವಿದೆ. ಪ.ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 75ರಷ್ಟು ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಪ್ರವೇಶಾತಿ ಕಲ್ಪಿಸಿ ಗ್ರಾಮಾಂತರ ಪ್ರದೇಶದ ಸುತ್ತಮುತ್ತಲಿನ ಪರಿಶಿಷ್ಟ ವರ್ಗದ ಮಕ್ಕಳು ಈ ಶಾಲೆಗೆ ಸೇರಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ 03 ಆಶ್ರಮ ಶಾಲೆಗಳಿದ್ದು, ಅದರಲ್ಲಿ ಮೊಳಕಾಲ್ಮೂರು ತಾಲ್ಲೂಕಿನ ರಾಂಪುರ, ಹೊಸದುರ್ಗ ತಾಲ್ಲೂಕಿನ ನಾಗತೀಹಳ್ಳಿ ಹಾಗೂ ಹೊಳಲ್ಕೆರೆ ತಾಲ್ಲೂಕಿನ ಚಿತ್ರಹಳ್ಳಿಯಲ್ಲಿ ತಲಾ 125 ವಿದ್ಯಾರ್ಥಿಗಳಂತೆ ಒಟ್ಟು 375 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿ ತಿಂಗಳು ಒಬ್ಬ ವಿದ್ಯಾರ್ಥಿಗೆ ಊಟ & ತಿಂಡಿಗೆ ರೂ.1450/– ದರದಲ್ಲಿ ವೆಚ್ಚ ಭರಿಸಲಾಗುತ್ತಿದೆ.

**6 ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಶಾಲೆಗಳ ನಿರ್ವಹಣೆ :**

- **ಚಿತ್ರದುರ್ಗ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ 05 ಮೊರಾರ್ಜಿ ದೇಸಾಯಿ ವಸತಿ ಶಾಲೆ, 02 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, 01 ಡಾ|| ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, 01 ಏಕಲವ್ಯ ಮಾದರಿ ವಸತಿ ಶಾಲೆ, 07 ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳಲ್ಲಿ ಒಟ್ಟು 3876 ವಿದ್ಯಾರ್ಥಿಗಳಿಗೆ ಪ್ರವೇಶವಕಾಶ ನೀಡಿದೆ.**
- **6ನೇ ತರಗತಿಗೆ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.**
- **ವಿದ್ಯಾರ್ಥಿಗಳಿಗೆ ವಸತಿ ಸಹಿತ ಶಿಕ್ಷಣವನ್ನು ನೀಡಲಾಗುತ್ತಿದ್ದು, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಯಲ್ಲಿ ಗುಣಮಟ್ಟದ ಫಲಿತಾಂಶವನ್ನು ಸಂಸ್ಥೆ ನೀಡುತ್ತಿದೆ.**

**7 ವಿದ್ಯಾರ್ಥಿ ವೇತನಗಳು:**

**1.ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ:** 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಮಧ್ಯದಲ್ಲಿಯೇ ಶಾಲೆ ಬಿಡುವುದನ್ನು ತಡೆಗಟ್ಟಲು ಹಾಗೂ ವಿದ್ಯಾರ್ಥಿಗಳ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸುವ ಸಲುವಾಗಿ ಈ ಕೆಳಕಂಡ ದರದಲ್ಲಿ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.

| ಕ್ರ.ಸಂ | ತರಗತಿ | ಆದಾಯ ಮಿತಿ | ಬಾಲಕ | ಬಾಲಕಿ |
|---|---|---|---|---|
| 1 | 1 ರಿಂದ 5 | ರೂ.6.00 ಲಕ್ಷ | ರೂ.1000 | ರೂ.1100 |
| 2 | 6 ರಿಂದ 7 | | ರೂ.1150 | ರೂ.1250 |
| 3 | 8 | | ರೂ.1250 | ರೂ.1350 |
| 4 | 9 – 10 | ರೂ.2.50 ಲಕ್ಷ | ರೂ.3000 | ರೂ.3000 |

ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಂತರ್‌ಜಾಲ WWW.TW.KAR.NIC.INನಲ್ಲಿ ಅರ್ಜಿಯನ್ನು ಸಲ್ಲಿಸಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಿದ ನಂತರ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್/ನೆಫ್ಟ್ ಮುಖಾಂತರ ನೇರವಾಗಿ ಜಮಾ ಮಾಡಲಾಗುವುದು.

**2. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ:** ಭಾರತ ಸರ್ಕಾರದ ನಿಬಂಧನೆಗಳ ಮೇರೆಗೆ ಎಲ್ಲಾ ಅರ್ಹ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ. ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ.2,50,000/–ಗಳಿಗೆ ಮೀರದಿದ್ದಲ್ಲಿ, ಈ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುತ್ತಾರೆ. ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತಿದೆ.

| ಗ್ರೂಪ್ | ಕೋರ್ಸ್ (ಡೇ ಸ್ಕಾಲರ್/ಹಾಸ್ಟೇಲರ್) | ಡೇ ಸ್ಕಾಲರ್ (ರೂ.ಗಳಲ್ಲಿ) | ಹಾಸ್ಟೇಲರ್ |
|---|---|---|---|
| 1 | ಮೆಡಿಕಲ್/ ಇಂಜಿನೀಯರಿಂಗ್ | 550.00 | 1200.00 |
| 2 | ಪಿಜಿ/ಎಲ್‌ಎಲ್‌ಬಿ | 530.00 | 820.00 |
| 3 | ಪದವಿ | 300.00 | 570.00 |
| 4 | ಪಿಯುಸಿ/ಪಾಲಿಟೆಕ್ನಿಕ್ | 230.00 | 380.00 |

**8 ನಗದು ಬಹುಮಾನ ಹಣ:** ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರೆ ಅಂತಹ ವಿದ್ಯಾರ್ಥಿಗಳಿಗೆ ಕೆಳಕಂಡಂತೆ ನಗದು ಬಹುಮಾನ ನೀಡಲಾಗುತ್ತದೆ.

| ಕೋರ್ಸ್ ವಿವರ | ಬಹುಮಾನ ಹಣ |
|---|---|
| 2ನೇ ಪಿ.ಯು.ಸಿ. | ರೂ.20,000/– |
| ಪದವಿ | ರೂ.25,000/– |
| ಅಂತಿಮ ಸ್ನಾತಕೋತ್ತರ ಪದವಿ (ಎಂ.ಎ., ಎಂ.ಎಸ್ಸಿ., ಎಂ.ಕಾಂ.,) | ರೂ.30,000/– |
| ತಾಂತ್ರಿಕ ವೈಧ್ಯಕೀಯ, ಕೃಷಿ, ಪಶುವೈಧ್ಯ ಪದವಿಗಳು | ರೂ.35,000/– |

ಈ ನಗದು ಬಹುಮಾನಕ್ಕಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಂತರ್‌ಜಾಲ WWW.TW.KAR.NIC.IN ನಲ್ಲಿ ಅರ್ಜಿಯನ್ನು ಸಲ್ಲಿಸಿದ ನಂತರ ಆನ್‌ಲೈನ್ ಮೂಲಕ ಆರ್.ಟಿ.ಜಿ.ಎಸ್/ನೆಫ್ಟ್ ಮುಖಾಂತರ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು.

**9 ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಜಡಗ ಮತ್ತು ಬಾಲ ಹೆಸರಿನಲ್ಲಿ ಪ್ರೋತ್ಸಾಹಧನ:** ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಜಿಲ್ಲೆಯಲ್ಲಿ ಅಧಿಕ ಅಂಕ ಪಡೆದ ಒಬ್ಬ ಪರಿಶಿಷ್ಟ ವರ್ಗದ ವಿದ್ಯಾರ್ಥಿಗೆ ಸ್ವತಂತ್ರ ಹೋರಾಟದ ಭಾಗವಾದ ಅಲಿಗಲಿ ಬೇಡರ ಭಂಡಾಯದಲ್ಲಿ ಹುತಾತ್ಮರಾದ ಜಡಗ ಮತ್ತು ಬಾಲ ಇವರ ಹೆಸರಿನಲ್ಲಿ ರೂ.1.00 ಲಕ್ಷಗಳ ನಗದು ಪ್ರಶಸ್ತಿ ನೀಡಿ ಗೌರವಿಸಲಾಗುವುದು.

**10 ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಪ್ರವೇಶ ಪಡೆಯುವ ಪ. ವರ್ಗ/ಪ.ಜಾತಿಯ ವಿದ್ಯಾರ್ಥಿಗಳಿಗೆ ಧನ ಸಹಾಯ ನೆರವು :** ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಶೇಕಡ 60 ಮತ್ತು ಹೆಚ್ಚಿನ ಅಂಕ ಪಡೆದ ಪ. ವರ್ಗ/ಪ.ಜಾತಿ ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಪಡೆಯಲು ರೂ.10.00 ಲಕ್ಷಗಳ ವರೆಗೆ ಸಹಾಯಧನ ನೀಡಲಾಗುವುದು. ಎಂ.ಫಿಲ್ ಗೆ ರೂ.8,000/– ಹಾಗೂ ಪಿ.ಹೆಚ್‌ಡಿ ಗೆ ರೂ.10,000/–ಗಳ ಧನ ಸಹಾಯ ನೀಡಲಾಗುವುದು.

**11 ಕಾನೂನು ಪದವೀಧರರಿಗೆ ಶಿಷ್ಯ ವೇತನ:** ಪರಿಶಿಷ್ಟ ಪಂಗಡಗಳಿಗೆ ಸೇರಿದ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ಹೆಚ್ಚಿನ ಜ್ಞಾನ ಗಳಿಸಿಕೊಳ್ಳಲು ನೆರವಾಗುವಂತೆ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯ ಅವಧಿಯು 02 ವರ್ಷದ್ದಾಗಿದೆ. ತರಬೇತಿಯ ಅವಧಿಯಲ್ಲಿ ತಿಂಗಳಿಗೆ ರೂ.10000/–ರಂತೆ ಶಿಷ್ಯವೇತನ ನೀಡಲಾಗುವುದು. ಅಭ್ಯರ್ಥಿಯ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು ಹಾಗೂ ಕಾನೂನು ಪದವೀಧರರಾಗಿಬೇಕು. ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ನಿರುದ್ಯೋಗಿ ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯನ್ನು ಕೈಗೊಳ್ಳಲು ಹಾಗೂ ವಕೀಲರ ಸಂಘದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ಸಹಾಯವಾಗುವಂತೆ ಧನ ಸಹಾಯ ನೀಡಲಾಗುತ್ತದೆ. ಪುಸ್ತಕ ಖರೀದಿಗೆ ರೂ.5,000/–ಗಳ ಧನ ಸಹಾಯವನ್ನು ನೀಡಲಾಗುವುದು.

**12 ಹೆಚ್ಚುವರಿ ಭೋಜನಾ ವೆಚ್ಚ :** ರಾಜ್ಯ ಸರ್ಕಾರವು ನಿಲಯಾರ್ಥಿಗಳಿಗೆ ಆಹಾರ ವೆಚ್ಚಕ್ಕಾಗಿ ರೂ.1,500/–ಗಳನ್ನು ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿಗೆ ನೀಡಲಾಗುತ್ತಿದೆ. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಹಾಸ್ಟೆಲರ್ ದರದಲ್ಲಿ ಮಂಜೂರು ಮಾಡಿ ವ್ಯತ್ಯಾಸದ ಅನುದಾನವನ್ನು ಭರಿಸಲು ಹೆಚ್ಚುವರಿ ಭೋಜನಾ ಮತ್ತು ವಸತಿ ವೆಚ್ಚವನ್ನು ಮಂಜೂರು ಮಾಡಲಾಗುವುದು.

| ಗ್ರೂಪ್ | ಕೋರ್ಸ್ (ಡೇ ಸ್ಕಾಲರ್/ಹಾಸ್ಟೇಲರ್) | ಹಾಸ್ಟೇಲರ್ | ಇ.ಬಿ.ಎಲ್. ವ್ಯತ್ಯಾಸದ ಹಣ |
|---|---|---|---|
| 1 | ಮೆಡಿಕಲ್/ ಇಂಜಿನೀಯರಿಂಗ್ | 1200.00 | 550.00 |
| 2 | ಪಿಜಿ/ಎಲ್‌ಎಲ್‌ಬಿ | 820.00 | 930.00 |
| 3 | ಪದವಿ | 570.00 | 1180.00 |
| 4 | ಪಿಯುಸಿ/ಪಾಲಿಟೆಕ್ನಿಕ್ | 380.00 | 1370.00 |

**13 ಸಾಮಾಜಿಕ ಕಾರ್ಯಕ್ರಮಗಳು**

1. **ಸರಳ ಸಾಮೂಹಿಕ ವಿವಾಹ :** ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಸರಳವಾಗಿ ಮದುವೆ ಮಾಡಿಕೊಳ್ಳುವ ಪರಿಶಿಷ್ಟ ವರ್ಗಕ್ಕೆ ಸೇರಿದ ದಂಪತಿಗಳಿಗೆ ಒಂದು ಬಾರಿಗೆ ರೂ.50,000/–ಗಳ ಆರ್ಥಿಕ ನೆರವನ್ನು ಅವರ ಜೀವನೋಪಯಕ್ಕಾಗಿ ನೀಡಲಾಗುವುದು.
2. **ಅಂತರ್ ಜಾತಿ ವಿವಾಹ :** ಪರಿಶಿಷ್ಟ ಪಂಗಡದ ಪುರುಷರು ಇತರೆ ಜಾತಿಯ ಹೆಣ್ಣು ಮಕ್ಕಳನ್ನು ವಿವಾಹವಾದಲ್ಲಿ ರೂ.2.50 ಲಕ್ಷಗಳು ಹಾಗೂ ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳನ್ನು ಇತರೆ ಜಾತಿಯ ಪುರುಷರು ವಿವಾಹವಾದಲ್ಲಿ ರೂ.3.00 ಲಕ್ಷಗಳ ಧನ ಸಹಾಯವನ್ನು ನೀಡಲಾಗುವುದು.
3. **ವಿಧವಾ ಪುನರ್ ವಿವಾಹ :** ಪರಿಶಿಷ್ಟ ಪಂಗಡದ ವಿಧವೆಯರು ಮರು ವಿವಾಹವಾದಲ್ಲಿ ಅವರಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು.
4. **ದೇವದಾಸಿ ಮಕ್ಕಳ ವಿವಾಹ :** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಗುರುತಿಸಲ್ಪಟ್ಟ ದೇವದಾಸಿಯರ ಗಂಡು ಮಕ್ಕಳು ಇತರೆ ಜಾತಿಯ ಹುಡುಗಿಯನ್ನು ವಿವಾಹವಾದಲ್ಲಿ ರೂ.3.00 ಲಕ್ಷ ಹಾಗೂ ದೇವದಾಸಿಯರ ಹೆಣ್ಣು ಮಕ್ಕಳು ಇತರೆ ಜಾತಿಯ ಹುಡುಗನನ್ನು ವಿವಾಹವಾದ ಪ್ರಕರಣಗಳಲ್ಲಿ ರೂ.5.00 ಲಕ್ಷಗಳ ಪ್ರೋತ್ಸಾಹಧನವನ್ನು ನೀಡಲಾಗುವುದು.
5. **ಒಳ ಪಂಗಡಗಳ ಅಂತರ್‌ಜಾತಿ ವಿವಾಹವಾದ ದಂಪತಿಗಳಿಗೆ ಪ್ರೋತ್ಸಾಹಧನ:** ಪರಿಶಿಷ್ಟ ಪಂಗಡದ ಯುವಕ/ಯುವತಿಯರು ಪರಿಶಿಷ್ಟ ಪಂಗಡದ ಉಪಜಾತಿಗಳ ಯುವಕ/ ಯುವತಿಯರನ್ನು ವಿವಾಹವಾದಲ್ಲಿ ರೂ.2.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು.

**14 ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006, 2007ರಡಿ ಮತ್ತು ನಿಯಮಗಳು 2008(ತಿದ್ದುಪಡಿ ನಿಯಮ 2012)ರಡಿ:** ತಲ ತಲಾಂತರದಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡಲು ಈ ಕಾಯ್ದೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿರುತ್ತದೆ. ಸದರಿ ಕಾಯ್ದೆಯನ್ವಯ ಅರಣ್ಯ ವಾಸಿಗಳು ಕೆಳಕಂಡಂತೆ ಅರಣ್ಯ ಹಕ್ಕುಗಳನ್ನು ಪಡೆಯಲು ಅರ್ಹರಿರುತ್ತಾರೆ.

1 13–12–2005ಕ್ಕಿಂತಲೂ ಮುಂಚೆ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅನುಸೂಚಿತ ಬುಡಕಟ್ಟುಗಳ ಅರಣ್ಯ ವಾಸಿಗಳು. ಜೀವನಾಂಶಕ್ಕೆ ಅರಣ್ಯ ಭೂಮಿಯನ್ನು ಅವಲಂಬಿಸಿರಬೇಕು.

2 13–12–2005ಕ್ಕಿಂತಲೂ ಮುಂಚೆ ಕೊನೆ ಪಕ್ಷ ಮೂರು ತಲೆಮಾರಿನವರೆಗೆ ಅಂದರೆ ಎಪ್ಪತ್ತೈದು ವರ್ಷಗಳಿಂದ ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸುವ ಮತ್ತು ವಾಸ್ತವಿಕ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯದ ಅಥವಾ ಅರಣ್ಯಗಳ ಜಮೀನಿನ ಮೇಲೆ ಅವಲಂಬಿತವಾಗಿರುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಸಮುದಾಯ.

ಅದರಂತೆ ಅರ್ಹ ಅರಣ್ಯವಾಸಿಗಳು ಸಂಬಂಧಿಸಿದ ಅರಣ್ಯ ಹಕ್ಕುಗಳ ಸಮಿತಿಗಳಿಗೆ ನಿಗಧಿತ ನಮೂನೆಯಲ್ಲಿ ಅವಶ್ಯವಿರುವ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕಾಗಿದೆ. ಅರ್ಜಿಗಳನ್ನು ಪರಿಶೀಲಿಸಿ ಇತ್ಯರ್ಥಗೊಳಿಸಲು ಗ್ರಾಮ ಮಟ್ಟದ ಅರಣ್ಯ ಹಕ್ಕು ಸಮಿತಿ, ಉಪವಿಭಾಗ ಮಟ್ಟದ ಸಮಿತಿ ಹಾಗೂ ಜಿಲ್ಲಾ ಮಟ್ಟದ ಸಮಿತಿಗಳನ್ನು ಸರ್ಕಾರವು ರಚಿಸಿರುತ್ತದೆ. ಗ್ರಾಮ ಅರಣ್ಯ ಹಕ್ಕು ಸಮಿತಿಗಳು ಶಿಫಾರಸ್ಸು ಮಾಡುವ ಅರ್ಜಿಗಳನ್ನು ಉಪವಿಭಾಗ ಮಟ್ಟದ ಸಮಿತಿಯಲ್ಲಿ ಪರಿಶೀಲಿಸಿ ಜಿಲ್ಲಾ ಮಟ್ಟದ ಸಮಿತಿಗೆ ಕಳುಹಿಸಬೇಕಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಪರಿಶೀಲಿಸಿ ಅರ್ಹ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡಿ ಹಕ್ಕು ಪತ್ರಗಳನ್ನು ನೀಡಲಾಗುತ್ತಿದೆ.

**15 ಭಾರತ ಸಂವಿಧಾನ ಅನುಚ್ಛೇಧ 275(1) ಮತ್ತು ಕ್ರೂಢೀಕೃತ ಅನುದಾನ:** ಭಾರತ ಸಂವಿಧಾನ ಅನುಚ್ಛೇಧ 275(1) ಮತ್ತು ಕ್ರೂಢೀಕೃತ ಅನುದಾನದಡಿ ಪರಿಶಿಷ್ಟ ವರ್ಗದವರ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳಾದ ಸಿ.ಸಿ.ರಸ್ತೆ & ಬಾಕ್ಸ್ ಚರಂಡಿ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ, ವಾಲ್ಮೀಕಿ ಭವನ, ಸಮುದಾಯ ಭವನ, ಹೈಮಾಸ್ಟ್ ಮಿನಿ ವಿದ್ಯುತ್ ಎಲ್.ಇ.ಡಿ. ಬೀದಿ ದೀಪ, ಚೆಕ್ ಡ್ಯಾಂ, ಹನಿನೀರಾವರಿ, ಹೈನುಗಾರಿಕೆ, ಪಾಲಿಹೌಸ್, ಕುಕ್ಕಟ, ಎಕ್ಸ್‌ರೇ ಮಿಷನ್, ಮೊಲ ಸಾಕಾಣಿಕೆ, ಸರಕು ಸಾಗಾಣಿಕೆ ವಾಹನ, ಹಸು/ಎಮ್ಮೆ ಕರು ಘಟಕ, ಕುರಿ/ಮೇಕೆ ಘಟಕ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**16 ಸ್ಮಶಾನ ಅಭಿವೃದ್ಧಿ:** ಪ.ವರ್ಗದವರು ವಾಸವಿರುವ ಗ್ರಾಮಗಳಲ್ಲಿನ ಸ್ಮಶಾನಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ವಿಶ್ರಾಂತಿ ಕೊಠಡಿ, ಮಂಟಪ, ಗಿಡಗಳನ್ನು ನೆಡುವುದು, ಕಾಂಪೌಂಡ್ ನಿರ್ಮಾಣ ಹಾಗೂ ಸ್ಮಶಾನ ಇಲ್ಲದ ಗ್ರಾಮಗಳಿಗೆ ಸ್ಮಶಾನ ಜಾಗಕ್ಕೆ ಭೂಮಿ ಖರೀದಿಸಲು ಅನುದಾನ ಮಂಜೂರು ಮಾಡಲಾಗುವುದು.

**17 .ವಾಲ್ಮೀಕಿ ಭವನ:** ಜಿಲ್ಲಾ ಕೇಂದ್ರಗಳಿಗೆ ರೂ.4.00 ಕೋಟಿ, ತಾಲ್ಲೂಕು ಕೇಂದ್ರಗಳಿಗೆ ರೂ.2.00 ಕೋಟಿ, ಹೋಬಳಿ ಕೇಂದ್ರಗಳಿಗೆ ರೂ.75 ಲಕ್ಷ ಹಾಗೂ ಪರಿಶಿಷ್ಟ ವರ್ಗದ ಹೆಚ್ಚು ಜನಸಂಖ್ಯೆ ಇರುವ ಗ್ರಾಮಗಳಿಗೆ ರೂ.20 ಲಕ್ಷ ವೆಚ್ಚದಲ್ಲಿ ಪರಿಶಿಷ್ಟ ಪಂಗಡದ ಜನರಿಗೆ ಅನುಕೂಲವಾಗುವಂತೆ ವಾಲ್ಮೀಕಿ ಭವನಗಳನ್ನು ನಿರ್ಮಾಣ ಮಾಡಲು ಅವಕಾಶವಿರುತ್ತದೆ.

**18 ಸಂಘ ಸಂಸ್ಥೆಗಳಿಗೆ ಸಹಾಯಧನ:** ಪರಿಶಿಷ್ಟ ಪಂಗಡದ ಧಾರ್ಮಿಕ ಸಂಸ್ಥೆಗಳು/ ಸಂಘ ಸಂಸ್ಥೆಗಳು/ ಟ್ರಸ್ಟ್‌ಗಳು ನಡೆಸುವ ವಿದ್ಯಾರ್ಥಿನಿಲಯ/ಶಾಲಾ ಕಾಲೇಜು ಕಟ್ಟಡಗಳು/ ಸಮುದಾಯ ಭವನಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ಮಂಜೂರು ಮಾಡಲಾಗುವುದು.

### -: ಷರತ್ತುಗಳು :-

1. ಸಂಸ್ಥೆಯು ನೋಂದಣಿ ಪ್ರಮಾಣ ಪತ್ರ ಹೊಂದಿರಬೇಕು.
2. ಸಂಘ ಸಂಸ್ಥೆಗಳ ಕಾಯ್ದೆ ಮತ್ತು ನಿಯಮಗಳನ್ವಯ ನೋಂದಣಿ ದೃಢೀಕರಣ ಪತ್ರ ಹೊಂದಿರಬೇಕು.
3. ಬೈಲಾ ಪ್ರತಿ ಹೊಂದಿರಬೇಕು.
4. ಕಾರ್ಯಕಾರಿ ಮಂಡಳಿಯ ಸದಸ್ಯರ ಪಟ್ಟಿ ಮತ್ತು ವಿಳಾಸ ಹೊಂದಿರಬೇಕು.
5. ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಕುರಿತಂತೆ ಕಳೆದ 03 ವರ್ಷಗಳ ಲೆಕ್ಕ ಪತ್ರ/ ಆಡಿಟ್ ವರದಿ ಹೊಂದಿರಬೇಕು.
6. ಸ್ಥಳೀಯ ಸಂಸ್ಥೆಗಳಿಂದ ಕಟ್ಟಡದ/ನಕ್ಷೆಯ ಮೂಲ ಪ್ರತಿ ಪಡೆದಿರಬೇಕು.
7. ಸಂಸ್ಥೆಯ ಹೆಸರಿನಲ್ಲಿ ಜಮೀನು ಹೊಂದಿರುವ ಬಗ್ಗೆ ಖಾತಾ ಪ್ರತಿ ಹಾಗೂ ಇಲ್ಲಿಯವರೆಗೆ ಕಂದಾಯ ಪಾವತಿಸಿರುವ ಬಗ್ಗೆ ಪ್ರತಿಗಳನ್ನು ಸಲ್ಲಿಸಬೇಕು.

### -: ಕೇಂದ್ರ ಸರ್ಕಾರದ ಯೋಜನೆಗಳು :-

1. ಕೇಂದ್ರ ಸರ್ಕಾರವು ಪರಿಶಿಷ್ಟ ವರ್ಗದವರ ಸರ್ವಾಂಗೀಣ ಅಭಿವೃದ್ಧಿಗೆ ಕೆಳಕಂಡ ಯೋಜನೆಗಳಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆ ಮಾಡಿ ಸಹಕರಿಸುತ್ತಿದೆ.

1. ತರಬೇತಿ ಮತ್ತು ಸಂಬಂಧಿತ ಕಾರ್ಯಕ್ರಮಗಳು – ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ವಿಶೇಷ ತರಬೇತಿ.
2. ಸಂಶೋಧನೆ ಮತ್ತು ತರಬೇತಿ (ಬುಡಕಟ್ಟು ಸಂಶೋಧನಾ ಕೇಂದ್ರ) ಇದರ ಮೂಲಕ ಕಮ್ಮಟ, ಸೆಮಿನಾರ್ಸ್ ಸಂಶೋಧನೆ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
3. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮತ್ತು ಪುಸ್ತಕ ಭಂಡಾರ – ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ಓದುತ್ತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಾವತಿಸುವುದು.
4. ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ.
5. ಪರಿಶಿಷ್ಟ ವರ್ಗದ ಆಶ್ರಮ ಶಾಲೆಗಳ ಕಟ್ಟಡ ನಿರ್ಮಾಣ.
6. ಏಕಲವ್ಯ ಮಾದರಿ ವಸತಿ ಶಾಲೆಗಳ ಸ್ಥಾಪನೆ ಮತ್ತು ನಿರ್ವಹಣೆ.

(ಯೋಜನೆಗಳು ಮತ್ತು ಅನುದಾನದ ನಿಗಧಿ ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ ಹಾಗೂ ಷರತ್ತು/ನಿಬಂಧನೆಗಳು ಸೇರ್ಪಡೆಗೊಳ್ಳುತ್ತವೆ)

### ಹೆಚ್ಚಿನ ಮಾಹಿತಿಗಾಗಿ

**ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು,**
ಚಿತ್ರದುರ್ಗ ರವರನ್ನು ಸಂಪರ್ಕಿಸಲು ಕೋರಿದೆ. ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜೆ.ಸಿ.ಆರ್. 4ನೇ ಕ್ರಾಸ್(ಪೂರ್ವ), ಗಣೇಶ ದೇವಸ್ಥಾನದ ಹತ್ತಿರ,
ಚಿತ್ರದುರ್ಗ–577501
ದೂರವಾಣಿ ನಂ:08194–225427

- **ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಚಿತ್ರದುರ್ಗ ತಾ|| 08194-226659**
- **ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಚಳ್ಳಕೆರೆ ತಾ|| 08195-251255**
- **ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಮೊಳಕಾಲ್ಮುರು ತಾ|| -918198-295061**
- **ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹಿರಿಯೂರು ತಾ|| -08193-265234**
- **ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹೊಳಲ್ಕೆರೆ ತಾ|| -9480843109**
- **ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಹೊಸದುರ್ಗ ತಾ|| -08199-295052**

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T